ಕವಿತೆ

# ಅರಿಕೆಗಳು

1

ಅರಳಿ ಸರಿದ ಹಗಲುಗಳೆಷ್ಟೋ
ಆವರಿಸಿ ಕವಿದು ಕನಲಿದ
ಇರುಳುಗಳೆಷ್ಟೋ...
ಒಂದಂತೂ ದಿಟ
ಕವಿತೆಯೇ... ನಿನ್ನ ಅನುಪಸ್ಥಿತಿಯಲ್ಲಿ
ಈ ಎರಡು ಕ್ರಿಯೆಗಳೂ
ಸಂಭವಿಸುತ್ತಿವೆ ನಿರಂತರ
ಹಾಗೂ ಕಾಯುವಿಕೆಯಲ್ಲೇ ನಾ ಕರಗಿ
ಕಳೆದು ಹೋಗುತ್ತಿದ್ದೇನೆ ಸತತ.

ಪ್ರಭುವೇ...
ಹಗಲು ಇರುಳು
ಹಾಗೇ ಬಂದು ಹೋಗುತ್ತಿರಲಿ
ಕಾಯುವಿಕೆಯ ಸುಖ ಹೀಗೇ
ಅನಂತವಾಗಿರಲಿ.

2

ಪ್ರಭುವೇ... ನನಗೆ
ಪೂರ್ವಜನ್ಮದ ಅರಿವಿಲ್ಲ
ಪುನರ್ಜನ್ಮದ ಬಗ್ಗೆ ನಂಬಿಕೆಯೂ ಇಲ್ಲ
ಅತ್ತ ಇತ್ತ ಸುಳಿದಾಡಿ
ಸತಾಯಿಸುವ ಕವಿತೆಯನ್ನೊಮ್ಮೆ
ಇದೇ ಜನುಮದಲ್ಲಿ ನನ್ನ ಇದಿರು
ಎಳೆದು ತಂದು ನಿಲ್ಲಿಸಿ ಬಿಡು ಸಾಕು.

3


ಮೊದಲು ಕಣ್ಣು ಬಿಟ್ಟಾಗ ಜೋರಾಗಿ
ಶಬ್ದ ಹೊರಡಿಸಿ ಅತ್ತ ನೆನಪು
ಈಗಲೂ ಹಾಳು ಅಳು ನಿಲ್ಲುವುದಿಲ್ಲ
ಗುದ್ದಿ ಗುದ್ದಿ ಹೊರ ಬಂದರೂ
ಶಬ್ದ ಮಾತ್ರ ಕೇಳಿಸುತ್ತಿಲ್ಲ.

ದಯೆ ತೋರು ಕವಿತೆಯೇ..
ಎಲ್ಲಾ ಭಾರವನ್ನು ನಿನ್ನ ಹೆಗಲಿಗೇರಿಸಿರುವೆ
ಶಬ್ದವನ್ನು ನಿಶ್ಯಬ್ದವಾಗಿ ಇಳಿಸಿಬಿಡು
ಶಬ್ದ ಸ್ಫೋಟದ ಅನಾಹುತಕ್ಕೆ ನೀನೂ ಕೂಡ
ಕಾರಣವಾಗುವುದ ತಪ್ಪಿಸಿಕೋ...

4

ಅತ್ತಷ್ಟು ಬಾರಿ ನಗಲಿಲ್ಲ
ಆದರೂ ಅತ್ತದ್ದು ಸುದ್ದಿಯಾಗಲೇ ಇಲ್ಲ
ನಕ್ಕಿದ್ದು ಗುಲ್ಲೋ ಗುಲ್ಲು
ಕವಿತೆಯೇ... ನೀ ಎಚ್ಚರವಾಗಿರುವುದಷ್ಟೇ
ಮುಖ್ಯ ಇಲ್ಲಿ.
ಆಗ ಕಚಿ ಪಿಚಿ ಪಿಸಿ ಪಿಸಿಗಳ
ಸೊಲ್ಲಡಗಿ ಬಿಡುತ್ತದೆ
ನಾನೂ ನಿಶ್ಚಿಂತೆಯಾಗಿರಬಲ್ಲೆ.

• ಸ್ಮಿತಾ ಅಮೃತರಾಜ್


ವಾಗೀಶ ಹೆಗಡೆ